**<u>ದಿನಾಂಕಃ 24-07-2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**
**<u>ಪಾಟೀ ಸವಾಲುಃ ವಾದಿ ಪರ ಶ್ರೀ. ಆರ್.ವಿ.ಎನ್.ಕೆ. ವಕೀಲರಿಂದಃ</u>**

1. ನನ್ನ ಜನ್ಮ ದಿನಾಂಕಃ- 03-07-1983 ಆಗಿರುತ್ತದೆ. ನನ್ನ ಕುಟುಂಬದ ವಂಶವೃಕ್ಷ ಈ ದಾವೆಯಲ್ಲಿ ನೀಡಿರುತ್ತೇನೆ.

ಪ್ರಶ್ನೆಃ- ಮೃತ ಚಿನ್ನಪ್ಪನಿಗೆ ಎಷ್ಟು ಜನ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ?
ಉತ್ತರಃ- ಚಿನ್ನಪ್ಪ ಎನ್ನುವುದು ಪ್ರತ್ಯೇಕ ಹೆಸರು ಇರುವುದಿಲ್ಲ. ತಿಮ್ಮರಾಯಪ್ಪ ಉರ್ಫ್ ಚಿನ್ನಪ್ಪರವರಿಗೆ 3 ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಇರುತ್ತಾರೆ.

2. ಮೊದಲನೇಯವರು ಮುನಿಯಮ್ಮ, (2) ವೆಂಕಟಸ್ವಾಮಿ, (3) ನಾರಾಯಣಮ್ಮ, (4) ಗುರ್ರಪ್ಪ,(5) ಯಲ್ಲಮ್ಮ, ಇದ್ದರು. ಈ ದಾವೆಯಲ್ಲಿ ನಾರಾಯಣಮ್ಮ ಮತ್ತು ಯಲ್ಲಮ್ಮರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ನಾರಾಯಣಮ್ಮ ತೀರಿಹೋಗಿರುತ್ತಾರೆ ಅವರಿಗೆ ಮಕ್ಕಳು ಇರುವುದಿಲ್ಲ. ಯಲ್ಲಮ್ಮ ಜೀವಂತವಾಗಿರುತ್ತಾರೆ ಅವರಿಗೂ ಮಕ್ಕಳು ಇರುವುದಿಲ್ಲ. ನಾರಾಯಣಮ್ಮರಿಗೆ ತಿಮ್ಮಕ್ಕ ಎಂದು ಕರೆಯುತ್ತಾರೆ ಎಂದರೆ ಸುಳ್ಳು. ವೆಂಕಟಸ್ವಾಮಿ ಮತ್ತು ಗುರ್ರಪ್ಪನ ತಂದೆಯ ಹೆಸರು ಚಿನ್ನಪ್ಪ ಎಂದರೆ ಸುಳ್ಳು. ಸಾಕ್ಷಿ ಮುಂದುವರಿದು ಅವರ ಹೆಸರು ತಿಮ್ಮರಾಯಪ್ಪ ಉರ್ಫ ಚಿನ್ನಪ್ಪ ಇರುತ್ತದೆ ಎಂದು ಹೇಳುತ್ತಾರೆ. ಈ ದಾವೆ ಕಿರಿಯ ಶ್ರೇಣಿ ನ್ಯಾಯಾಲಯದಿಂದ ಮೌಲ್ಯಮಾಪನದ ಆಧಾರದ ಮೇರೆಗೆ ಮರಳಿ ಬಂದಿರುತ್ತದೆ ಎಂದರೆ ಸರಿ. ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಈ

ದಾವೆಯ ಸಂಖ್ಯೆಃ- 46 ಆಗಿದ್ದು ವರ್ಷ ನನಗೆ ನೆನಪಿಲ್ಲ. ಅದು ಓ.ಎಸ್. ಸಂಖ್ಯೆಃ- 46/2009 ಎಂದರೆ ಸರಿ.

2. ಅಸಲು ದಾವೆ ಸಂಖ್ಯೆಃ- 46/2009 ನನ್ನ ತಂದೆ ಎ.ಸಿ. ವೆಂಕಟಸ್ವಾಮಿ ನನ್ನ ಚಿಕ್ಕಪ್ಪ ಗುರ್ರಪ್ಪ ಸಲ್ಲಿಸಿದ್ದರು ಎಂದರೆ ಸರಿ. ಅಸಲು ದಾವೆ ಸಂಖ್ಯೆಃ- 46/2009 ಸಲ್ಲಿಸುವಾಗ ನನ್ನ ತಂದೆ ಮತ್ತು ಚಿಕ್ಕಪ್ಪನ ತಂದೆ ಹೆಸರು ಮೃತ ಚಿಕ್ಕಮಧುರಮ್ಮ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪನಿಗೆ ಅಸಲು ದಾವೆ ಸಂಖ್ಯೆಃ- 46/2009 ರಲ್ಲಿ ತಂದೆ ಹೆಸರು ಹೇಳಲು ತೊಂದರೆ ಇರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ಅದು ಬಿಟ್ಟು ಹೋಗಿರುತ್ತದೆ. ಸದರಿ ವಾದಪತ್ರ ತಯಾರಿಸುವಾಗ ತಂದೆ ಹೆಸರು ಬಿಟ್ಟು ಹೋಗಿರುತ್ತದೆ ಎಂದು ಹೇಳುತ್ತಾರೆ. ಅಸಲು ದಾವೆ ಸಂಖ್ಯೆಃ- 46/2009 ರಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪ ಅವರ ತಂದೆ ಹೆಸರು ಪ್ರತ್ಯೇಕವಾಗಿ ಹೇಳಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪನ ತಂದೆ ಹೆಸರು 2009 ರಿಂದ ಇಲ್ಲಿಯವರೆಗೆ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿ.

3. ನಾನು 15 ವರ್ಷಗಳಿಂದ ವಕೀಲಿ ವೃತ್ತಿ ಮಾಡುತ್ತಿದ್ದೇನೆ. ನಾನು 2010 ರಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿರುತ್ತೇನೆ ಈ ದಾವೆಯಲ್ಲಿ ನನ್ನ ತಂದೆ ಮೃತಪಟ್ಟ ನಂತರ ನಾನು ವಾರಸುದಾರನಾಗಿ ಬಂದ ನಂತರ ನನ್ನ ತಂದೆಯ ಹೆಸರು ವಾದಪತ್ರದಲ್ಲಿ ನಮೂದಾಗಿರುವುದಿಲ್ಲವೆಂದು ನನ್ನ ಗಮನಕ್ಕೆ ಬಂದಿರುತ್ತದೆ. ನನ್ನ ತಂದೆ ದಿನಾಂಕಃ- 12-05-2021 ರಂದು ಮೃತರಾಗಿರುತ್ತಾರೆ. ನಾನು ಈ ದಾವೆಯಲ್ಲಿ ನನ್ನ ತಂದೆಯ ವಾರಸುದಾರನಾಗಿ ಬಂದ ನಂತರ ನನ್ನ ತಂದೆಯ ತಂದೆ ಹೆಸರು ವಾದಪತ್ರದಲ್ಲಿ ನಮೂದಿಸಿರುವುದಿಲ್ಲ ಆದರೆ ದಾಖಲೆ ನೀಡಿರುತ್ತೇನೆ.

ಚಿಕ್ಕಮದ್ದೂರಮ್ಮರ ಗಂಡನ ಹೆಸರು ತಿಮ್ಮರಾಯಪ್ಪ ಉರ್ಫ್ ಚಿನ್ನಪ್ಪ ಆಗಿರುತ್ತದೆ. ಚಿಕ್ಕಮದ್ದೂರಮ್ಮರ ಗಂಡನ ಹೆಸರು ತಿಮ್ಮರಾಯಪ್ಪ ಆಗಿರುತ್ತದೆ ಆದರೆ ಅವರು ತಿಮ್ಮರಾಯಪ್ಪ ಉರ್ಫ್ ಚಿನ್ನಪ್ಪ ಆಗಿರುವುದಿಲ್ಲ ಎಂದರೆ ಸುಳ್ಳು. ಸಾಕ್ಷಿ ಮುಂದುವರಿದು ಎರಡೂ ಹೆಸರುಗಳು ಒಬ್ಬರಿಗೆ ಸೇರಿರುತ್ತವೆ ಎಂದು ಹೇಳುತ್ತಾರೆ. ತಿಮ್ಮರಾಯಪ್ಪರಿಗೆ ಉರ್ಫ್ ಚಿನ್ನಪ್ಪ ಎನ್ನುವ ಹೆಸರು ಇರಲಿಲ್ಲ ಅವರಿಗೆ ಕೇವಲ ತಿಮ್ಮರಾಯಪ್ಪ ಎಂದು ಕರೆಯುತ್ತಿದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೇ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಸರ್ಕಾರಿ ಸೌಲಭ್ಯ ಪಡೆಯಲು ಯಾವುದೇ ವ್ಯಕ್ತಿಯ ತಂದೆ ಹೆಸರು ನಮೂದು ಮಾಡುತ್ತಾರೆ ತಾಯಿಯ ಹೆಸರು ನಮೂದು ಮಾಡುವುದಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ಎರಡೂ ಹೆಸರುಗಳು ನಮೂದು ಮಾಡುತ್ತಾರೆ ಎಂದು ಹೇಳುತ್ತಾರೆ.

4. ಈ ದಾವೆಯಲ್ಲಿ ನಾವು ವಂಶವೃಕ್ಷ ಮತ್ತು ಚಿಕ್ಕಮದ್ದೂರಮ್ಮರ ಹೆಸರಿಗೆ ಇರುವ ವಿಲ್ , ರಿಗ್ರ್ಯಾಂಟ್ , ಇತರೆ ಕಂದಾಯ ದಾಖಲೆಗಳನ್ನು ಮಾಲೀಕತ್ವ ಪರಿಹಾರ ಕೇಳುತ್ತಿದ್ದೇವೆ. ನಾವು ಅಸಲು ದಾವೆ ಸಂಖ್ಯೆಃ-46/2009 ಮತ್ತು ಈ ದಾವೆಯಲ್ಲಿ ವಿಲ್ ಆಧಾರದ ಮೇಲೆ ಪರಿಹಾರ ಕೇಳುತ್ತಿದ್ದೇವೆ ಎನ್ನುವ ಪ್ರಶ್ನೆಗೆ ಸಾಕ್ಷಿ ವಿಲ್ ಮತ್ತು ಕಂದಾಯ ದಾಖಲೆಗಳ ಮೇಲೆ ಪರಿಹಾರ ಕೇಳುತ್ತಿದ್ದೇವೆ ಎಂದು ಹೇಳುತ್ತಾರೆ. ನಿಪಿ-1 ಮರಣ ಶಾಸನದಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತವೆ. ನಿಪಿ-1 ವಿಲ್ ನಲ್ಲಿರುವ ವಿಷಯಗಳನ್ನು ನಾನು ತಿಳಿದುಕೊಂಡಿರುತ್ತೇನೆ. ವಿಲ್ ನಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ. ವಿಲ್ ನಲ್ಲಿ ಬರೆದ ವಿಚಾರಕ್ಕೆ ಸಂಬಂಧಿಸಿದಂತೆ ಯಾವುದೇ ತಂಟೆ ತಕರಾರು ಇರುವುದಿಲ್ಲ.

ನಿಪಿ-1 ರ ಬೆರಳಚ್ಚು ಪ್ರತಿ ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ತೊಂದರೆ ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಕೇ. ಹೇ. ಸರಿ ಇದೆ.**

**Sd/-**
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**